ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

email : registrar@uni-mysore.ac.in
www.uni-mysore.ac.in

**ಮೈಸೂರು ವಿಶ್ವವಿದ್ಯಾನಿಲಯ**

**ಸ್ಥಾಪನೆ : 1916**

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

**ಸಂಖ್ಯೆ: ಎಸಿ6/148/2024-25**

**ದಿನಾಂಕ: 10.03.2026**

## ಸುತ್ತೋಲೆ

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಬಿ.ಎಡ್. ಪ್ರೋಗ್ರಾಂನ ಪ್ರವೇಶಾತಿಗೆ ದಿನಾಂಕ ವಿಸ್ತರಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ 22.12.2025.
2. ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಇಡಿ 05 ಯುಜಿಹೆಚ್ 2026 (ಇ), ದಿನಾಂಕ: 06.03.2026.
3. ಮಾನ್ಯ ಕುಲಪತಿಯವರ ಆದೇಶ ದಿನಾಂಕ 09.03.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿನ ಅಧಿಸೂಚನೆಯ ಮುಂದುವರಿಕೆಯಾಗಿ, ಉಲ್ಲೇಖ(2)ರಲ್ಲಿನ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರದಲ್ಲಿನ ನಿರ್ದೇಶಾನುಸಾರ ಮೈಸೂರು ಜಿಲ್ಲೆಯ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಬಿ.ಇಡಿ. ಕಾಲೇಜುಗಳಲ್ಲಿ **2025-26ನೇ** ಸಾಲಿನ ಸರ್ಕಾರಿ ಕೋಟಾದಡಿ ಭರ್ತಿಯಾಗದೇ ಬಾಕಿ ಉಳಿದಿರುವ **ಸರ್ಕಾರಿ ಸೀಟ್‌ಗಳನ್ನು ಕೇಂದ್ರೀಕೃತ ದಾಖಲಾತಿ ಘಟಕದ ಮಾಹಿತಿಯಂತೆ ಕಡ್ಡಾಯವಾಗಿ ಆಯಾ ಪ್ರವರ್ಗಕ್ಕೇ ಪ್ರವೇಶಾತಿ ನೀಡುವ ಷರತ್ತಿಗೊಳಪಟ್ಟು** ಆಡಳಿತ ಮಂಡಳಿ ಕೋಟಾದಡಿ ದಿನಾಂಕ **17.03.2026ರ** ಒಳಗೆ ಭರ್ತಿ ಮಾಡಿಕೊಳ್ಳುವಂತೆ ತಿಳಿಸಲಾಗಿದೆ. ಈ ಷರತ್ತನ್ನು ಮೀರಿದ ಪ್ರವೇಶಾತಿಗಳನ್ನು ಅನುಮೋದಿಸಲಾಗುವುದಿಲ್ಲವೆಂದು ಸಹ ತಿಳಿಸಲಾಗಿದೆ.

ಮುಂದುವರೆದು, **2025-26ನೇ** ಶೈಕ್ಷಣಿಕ ಸಾಲಿನ **ಪ್ರಥಮ ವರ್ಷದ** ಬಿ.ಎಡ್. ಪ್ರೋಗ್ರಾಂನ ಪ್ರವೇಶಾತಿ ಸಂಬಂಧ ವಿದ್ಯಾರ್ಥಿಗಳಿಂದ ದಿನಾಂಕ **17.03.2026ರೊಳಗೆ** Offlineನಲ್ಲಿ ಶುಲ್ಕ ಪಾವತಿಸಿಕೊಂಡು ನಂತರ ಪಾವತಿಸಿದ ಶುಲ್ಕಗಳ ರಶೀದಿಗಳನ್ನು **UUCMS Portalನಲ್ಲಿ** ಸದರಿ ವಿದ್ಯಾರ್ಥಿಗಳಿಂದ Upload ಮಾಡಿಸುವಂತೆ ತಿಳಿಸಲಾಗಿದೆ. ನಂತರ, ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ದಿನಾಂಕ **20.03.2026ರೊಳಗೆ** ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾ ಮಾಡಿ ಪ್ರವೇಶಾತಿ ವಿವರಗಳು ಮತ್ತು ಮೂಲ ಚಲನ್ ಅನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ದಿನಾಂಕ **23.03.2026ರೊಳಗೆ** ಕಡ್ಡಾಯವಾಗಿ ಪ್ರವೇಶಾತಿಗಳಿಗೆ ಅನುಮೋದನೆ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.

ನಿಗದಿತ ಸಮಯದೊಳಗೆ ಪ್ರವೇಶಾತಿಗಳನ್ನು ಅನುಮೋದಿಸಿಕೊಳ್ಳದಿದ್ದಲ್ಲಿ ವಿದ್ಯಾರ್ಥಿಗಳಿಗೆ **State Scholarship Portal** ಮುಖಾಂತರ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಅನನುಕೂಲವಾದಲ್ಲಿ ಅದಕ್ಕೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ನೇರ ಹೊಣೆಗಾರರಾಗುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

10/3/2026

ಕುಲಸಚಿವರು

**ಕುಲಸಚಿವರು**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು**

**ಇವರಿಗೆ;**

1. ಎಲ್ಲಾ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಡೀನರು, ಶಿಕ್ಷಣ ನಿಕಾಯ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪು.ತಿ.ನೋ.

4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಮಾಹಿತಿ ಸಂವಹನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಮುಂದಿನ ಸೂಕ್ತ ಕ್ರಮಕ್ಕಾಗಿ.
7. ಮಾನ್ಯ ಕುಲಪತಿ/ ಕುಲಸಚಿವರು/ ಕುಲಸಚಿವರು(ಪರೀಕ್ಷಾಂಗ)ರವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.